ಬರೆದಿರಬಹುದು, ಇಪ್ಪತ್ನಾಲ್ಕನೆಯ ವಯೋಮಾನದಲ್ಲೇ ರಚಿಸಿದ್ದಿರಬಹುದೇ ಎಂಬ ಚರ್ಚೆ ವಿದ್ವಾಂಸರ ನಡುವೆ ನಡೆದಿದೆ. ಜನ್ನನ ಎರಡೂ ಕಾವ್ಯಗಳ ಮನುಷ್ಯಾಂತರ್ಗತ ತುಡಿತಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ, ಈ ಅನುಭವ ಮುಕುರ ಅಥವಾ ಸ್ಮರ ತಂತ್ರವನ್ನು ಅವನೇ ಬರೆದಿರಲು ಸಾಧ್ಯವಲ್ಲದೆ, ಇದು ಕವಿಯ ಯಾವ ವಯಸ್ಸಿನ ರಚನೆ ಎಂಬ ಚರ್ಚೆ ಕೂಡ ಅನಗತ್ಯವೆನಿಸುತ್ತದೆ. ಈ ಪ್ರೇಮ ಪಾಶಾಕರ್ಷಣೆ ಎಂಬುದು ಯಾವ ವಯಸ್ಸಿನಲ್ಲಿ ಹುಟ್ಟಿ ಯಾವ ವಯೋಮಾನದಲ್ಲಿ ಕಡೆ ಹಾಯುತ್ತದೆಂದು ಕರಾರುವಾಕ್ಕಾಗಿ ಹೇಳಲು ಸಾಧ್ಯವೇ? ಹೀಗಾಗಿ ತನ್ನ ಎರಡೂ ಕೃತಿಗಳ ಮೂಲ ಸಾರಾಂಶವಾಗಿ ಮೊದಲೇ ಮುನ್ನುಡಿಯಂತೆ ಅಥವಾ ನಂತರದ ಹಿನ್ನುಡಿಯಂತೆ ರಚಿಸಿದ್ದಿರಬಹುದಷ್ಟೆ.

★★★

ಹಳಗನ್ನಡ ಪರಂಪರೆಯ ನವ್ಯಕವಿ ಎನಿಸುವ ಜನ್ನನ ಯಶೋಧರ ಚರಿತೆಯಲ್ಲಿ ಬಹುಚರ್ಚೆಗೆ ಒಳಗಾಗಿರುವ ಭಾಗವೆಂದರೆ ಅಷ್ಟಾವಂಕ–ಅಮೃತಮತಿಯರ ಪ್ರಣಯ ಪ್ರಸಂಗ. ಲಾಗಾಯ್ತಿನಿಂದ ಕೃತಿಯ ಈ ಭಾಗವನ್ನು ವಿದ್ವಾಂಸರು ನಾನಾ ಕ್ರಮದಲ್ಲಿ ಚರ್ಚಿಸುತ್ತ ಇದೇ ಭಾಗವನ್ನು ತರಗತಿಗಳಲ್ಲಿ ಪಠ್ಯವಾಗಿಸುತ್ತ ಬಂದಿರುವುದಿದೆ. ಜನ್ನನಿಗೆ ಯಶೋಧರ ಚರಿತೆಯಲ್ಲಿ ಅಮೃತಮತಿ–ಅಷ್ಟಾವಂಕರ ಭೇಟಿ ಪ್ರಸಂಗಕ್ಕಿಂತಲೂ ಮುಖ್ಯವೆನಿಸಿರಬಹುದಾದ ಭಾಗವೆಂದರೆ ಬಹುಶಃ ಮಾರಿದತ್ತನ ಹಿಂಸಾರಭಸಮತಿ ಮತ್ತು ಅದರ ಎದುರು ಇಬ್ಬರು ಮಕ್ಕಳು ನಿಲ್ಲುವ ಪ್ರಸಂಗ.

ಭೋಗದ ತುತ್ತತುದಿ ಮತ್ತು ಅದರ ಇನ್ನೊಂದು ಕೊನೆಯಾದ ವೈರಾಗ್ಯವನ್ನು ಮೇಲಿಂದ ಮೇಲೆ ಹೇಳಿಕೊಂಡು ಬರುವ ಜೈನಕವಿಗಳ ನಡುವೆ ಜನ್ನ ಯಶೋಧರ ಚರಿತೆಯಲ್ಲಿ ತೀವ್ರ ಥರ ಹಿಂಸೆ ಅದರ ವಿರುದ್ಧ ದಿಕ್ಕಿನ ಶಿಶು ರೂಪದ ಅಹಿಂಸಾಭಾವವನ್ನು ತಂದು ನಿಲ್ಲಿಸುವ ಯಶೋಧರ ಚರಿತೆ ಕೃತಿಯ ಪೂರ್ವಭಾಗದ ಕಥನ ಅಪೂರ್ವವೆನಿಸುವಂತೆ ನಿರೂಪಿತವಾಗಿರುವುದನ್ನು ಗಮನಿಸಬೇಕು. ಇದಕ್ಕೂ ಮೊದಲು ಈ ಕಥನ ತನಗೂ ಪೂರ್ವದಲ್ಲಿಯೇ ಇದ್ದಿತೆಂದು ಜನ್ನ ಪ್ರಸ್ತಾಪಿಸುವುದನ್ನೂ ಇಲ್ಲಿ ಉದ್ಧರಿಸುವುದು ಸೂಕ್ತ–

ಕ್ಷಿತಿಯೊಳ್ ಸಂಸ್ಕೃತದಿಂ ಪ್ರಾ
ಕೃತದಿಂ ಕನ್ನಡದಿನಾದ್ಯರ್ ಈ ಕೃತಿಯಂ
ಕೃತಿ ಮಾಡಿದರವರ್ಗಳ ಸನ್
ಮತಿ ಕೈಗೊಡುಗೆಮಗೆ ಸರಸ ಪದ ಪದ್ಧತಿಯೊಳ್ ||

ಎಂಬ ಈ ಪದ್ಯದಲ್ಲಿ ಸಂಸ್ಕೃತ, ಪ್ರಾಕೃತ, ಅಪಭ್ರಂಶ ಭಾಷೆಗಳಲ್ಲಿ ಜನ್ನನಿಗೆ ಪೂರ್ವದಲ್ಲಿಯೇ ಯಶೋಧರ ಚರಿತೆಯ ವಸ್ತುವನ್ನು ಕುರಿತು ಕೃತಿಗಳು ದೊರೆತಿರುತ್ತವೆ. ಕನ್ನಡವೂ ಒಳಗೊಂಡಂತೆ ಈಗಾಗಲೇ ಹೇಳಿದಂತೆ ಭಾರತೀಯ ಜನಪದ ಸಾಹಿತ್ಯದಲ್ಲಿಯೂ ಈ ಕಥೆ ಸೇರಿಕೊಂಡಿದೆ. ಕನ್ನಡದಲ್ಲಿ ಯಶೋಧರ ಚರಿತೆಗೂ ಮೊದಲು ಬಂದ ಕಾವ್ಯ ಯಾರದು ಎಂಬುದು ತಿಳಿದುಬಂದಿಲ್ಲ. ಆದರೆ ಇದ್ದಿರಬೇಕು. ಇಲ್ಲದಿದ್ದರೆ ಕನ್ನಡದಲ್ಲಿ ತನಗಿಂತ ಮೊದಲು ಎಂದು ಜನ್ನ ಹೇಳುವ ಸಾಧ್ಯತೆ ಇರುತ್ತಿರಲಿಲ್ಲ. ಬದಲಾಗಿ ಅಂಥ ಕನ್ನಡ ಕಥಾ ರಚನೆಯ ಆದಿಪುರುಷ ತಾನೇ ಎಂದು ಹೇಳಿಕೊಳ್ಳುವ ಜಾಯಮಾನದವನು ಜನ್ನ.

ಇದೇನೇ ಇರಲಿ ಜನ್ನ ತನ್ನ ಶ್ರೀಮಂತ ಬದುಕಿನಲ್ಲಿ, ಸುತ್ತಲಿನ ರಾಜಕಾರಣದಲ್ಲಿ ಅರಮನೆಯ ಬದುಕಿನ ವಿಘಟನೆಗಳನ್ನು ಕಂಡದ್ದಿರಬೇಕು. ಮೋಹದ ಆಕರ್ಷಣೆಯನ್ನು ನಿಯಂತ್ರಿಸಲು ಹಗ್ಗವಿಲ್ಲ, ಕಬ್ಬಿಣದ ಸರಪಳಿಯೂ ಇಲ್ಲ. ಗಂಡು ಹೆಣ್ಣಿನ ಸಮಸ್ಯೆ ಅನಾದಿ, ಅನಂತ. ಮೋಹಕ್ಕೆ ತುತ್ತಾದ ಮನುಷ್ಯ ಜೀವಗಳು ಪಾತ್ರಾಪಾತ್ರಗಳನ್ನಾಗಲಿ, ಪಾಪ ಪುಣ್ಯಗಳನ್ನಾಗಲಿ ಲೆಕ್ಕಿಸುವುದಿಲ್ಲ.